ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಏಕ ರೂಪ ಶಾಸನ ಜಾರಿಗೆ ತರಲು ಕ್ರಮ ತೆಗೆದುಕೊಳ್ಳಲಾಗಿದೆ. ಇದರಲ್ಲಿ ಕಾಮನ್ ಗುಡ್‌ಫಂಡ್‌ಗೆ ಅವಕಾಶವಿದ್ದು ಸದರಿ ನಿಧಿಯಿಂದ ಸಮಗ್ರ ದೇವಾಲಯಗಳನ್ನು ಅಭಿವೃದ್ಧಿ ಪಡಿಸಲು ಪರಿಶೀಲಿಸಲಾಗುವುದು.

ಆ)

೧೯೬೬-೬೮	...	೨,೦೯,೫೦,೦೦೦-೦೦
೧೯೬೮-೬೯	...	೧,೫೮,೯೦,೦೦೦-೦೦
೧೯೬೯-೭೦	...	೧,೫೨,೪೮,೬೫-೦೦
ಒಟ್ಟು ರೂ.		೫,೨೫,೪೮,೬೫-೦೨

ಇ) ಸದರಿ ದೇವಾಲಯಕ್ಕೆ ಳಪ ಎಕರೆ ಖಿಲ್ಲಾ ಜಮೀನನ್ನು ಖರೀದಿಸಲು ಉದ್ದೇಶಿಸಿದ್ದು ಈ ಜಮೀನು ದೇವಾಲಯದ ಸುಬರ್ಧಿಗೆ ಬಂದಂಹವರೆ ಭಕ್ತಾದಿಗಳ ಅನುಕೂಲತೆ ದೃಷ್ಟಿಯಿಂದ ಮಾಸ್ಟರ್ ಪ್ಲಾನ್ ರೂಪಿಸಲಾಗುವುದು. ಹೌದು ಕುಡಿಯುವ ನೀರಿನ ಸೌಲಭ್ಯ ಒದಗಿಸುವುದಕ್ಕಾಗಿ ಈಗಾಗಲೇ ಸಂಬಂಧಪಟ್ಟ ಇಲಾಖೆಯೊಂದಿಗೆ ವ್ಯವಹರಿಸಲಾಗುತ್ತಿದೆ. ವಾಸಸ್ಥಳದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಈ) ಹೌದು.

ಕಂದಾಯ ಅಧಿಕಾರಿಗಳ ಬಗ್ಗೆ.

೩೧೫. ಶ್ರೀ ಆಂಜನಮೂರ್ತಿ (ನೆಲಮಂಗಲ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಶಿಳಿಸುವರೆ:—

ಅ) ರಾಜ್ಯದಲ್ಲಿರುವ ಕಂದಾಯ ಅಧಿಕಾರಿಗಳು ಗ್ರಾಮಲೆಕ್ಕಾಧಿಕಾರಿಗಳನ್ನು ನೇಮಿಸಿರುವ ಸ್ಥಳಗಳಲ್ಲಿ ವಸತಿ ಸೌಕರ್ಯ ಇಲ್ಲದೆ ಇರುವುದರಿಂದ ಅವರುಗಳು ಬೇರೆಡೆ ವಾಸಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಆಯಾ ಜಾಗದಲ್ಲಿ ಅವರುಗಳು ವಾಸಿಸಲು ಅನುಕೂಲವಾಗುವಂತೆ ವಾಸದ ಮನೆಗಳನ್ನು ಕಟ್ಟಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಗ್ರಾಮಲೆಕ್ಕಾಧಿಕಾರಿಗಳು ವಸತಿ ಸೌಕರ್ಯದ ಅಭಾವದಿಂದ ಬೇರೆಡೆಯಲ್ಲಿ ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈಗ ರಾಜ್ಯದಲ್ಲಿ ೮೬೦೧ ಗ್ರಾಮಲೆಕ್ಕಾಧಿಕಾರಿಗಳಿದ್ದು ೧೦೬೩ ಗ್ರಾಮಲೆಕ್ಕಾಧಿಕಾರಿಗಳಿಗೆ ವಸತಿ ಗೃಹಗಳನ್ನು ನಿರ್ಮಿಸಲಾಗಿದೆ, ಉಳಿದವೆ ಹಂತ ಹಂತವಾಗಿ ಈ ಕಾರ್ಯಕ್ರಮವನ್ನು ಜಾರಿಗೊಳಿಸುವುದೂ ಸರ್ಕಾರದ ಉದ್ದೇಶವಾಗಿದೆ. ಗ್ರಾಮಲೆಕ್ಕಾಧಿಕಾರಿಗಳಿಗೆ ಅವರ ಕೇಂದ್ರ ಸ್ಥಾನಗಳಲ್ಲಿ ವಸತಿ ಗೃಹಗಳನ್ನು ನಿರ್ಮಿಸುವ ಬಗ್ಗೆ ಸಾಧ್ಯವಾಗಿ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

ವಕ್ಫ್ ಆಸ್ತಿಯ ದುರುಪಯೋಗದ ಕುರಿತು ವಿಚಾರಣೆ

೩೮. ಶ್ರೀ ವಂಟ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಾರಿಗೆ ಮಂತ್ರಿ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ವಕ್ಫ್ ಆಸ್ತಿಯ ದುರುಪಯೋಗದ ಕುರಿತು ಒಬ್ಬ ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ ವಿಚಾರಣೆ ಮಾಡಿಸುವುದಾಗಿ ಸರ್ಕಾರವು ಘೋಷಿಸಿದ್ದು ನಿಜವಲ್ಲವೇ;

ಆ) ಹಾಗಿದ್ದಲ್ಲಿ ನ್ಯಾಯಾಂಗ ವಿಚಾರಣೆ ಪ್ರಾರಂಭವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು).—

ಅ) ಹೌದು.

ಆ) ವಿಚಾರಣಾ ಆಯೋಗ ಕಾಯಿದೆ, ೧೯೫೨ರಡಿಯಲ್ಲಿ ಪ್ರೊಫೆಸರ್ ಬಶೀರ ಹುಸೇನರವರ ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರ ಪಕ್ಕ ವಿಚಾರಣಾ ಆಯೋಗವನ್ನು ಅಧಿಸೂಚನೆ ಸಂಖ್ಯೆ: ಆರ್‌ಡಿ ೧ ಡಬ್ಲ್ಯೂಇಎಸ್ ೮೬ ದಿನಾಂಕ ೨೫-೬-೮೮ರಲ್ಲಿ ನೇಮಿಸಲಾಗಿತ್ತು ಹಾಗೂ ಸದರಿ ಆಯೋಗದ ಅವಧಿಯು ದಿನಾಂಕ ೨೫-೧೨-೮೯ರಂದು ಕೊನೆಗೊಂಡಿತು. ಈ ಆಯೋಗವು ಸಲ್ಲಿಸಿದ ವರದಿಯನ್ನು ಕೇವಲ ಅಧ್ಯಕ್ಷರು ಮಾತ್ರ ಸಹಿ ಮಾಡಿದ್ದು ಇನ್ನಿಬ್ಬರು ಸದಸ್ಯರು ಸಹಿ ಮಾಡಿರದಿದ್ದ ಕಾರಣ, ಕಾನೂನು ಇಲಾಖೆಯು ಸಲುಪೆಯ ಮೇರೆಗೆ ಆ ವರದಿಯನ್ನು ಸರ್ಕಾರ ಅಂಗೀಕರಿಸಲಿಲ್ಲ. ಆದರೆ ಮುಂದೆ ಸರ್ಕಾರವು ಶ್ರೀ ಫಜಲ್ಲಾ ರಜ್ಜಿ, ಏಕ ಸದಸ್ಯ ಪಕ್ಕ ವಿಚಾರಣಾ ಆಯೋಗವನ್ನು ಅಧಿಸೂಚನೆ ಸಂಖ್ಯೆ:ಆರ್‌ಡಿ ೨೨೭ ಡಬ್ಲ್ಯೂಇಎಸ್‌೮೮ ದಿನಾಂಕ ೧೭-೧೦-೯೦ರಲ್ಲಿ ಒಂದು ವರ್ಷದ ಅವಧಿಗೆ ನೇಮಿಸಿದೆ.

ಈ ಆಯೋಗವು ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ವಿಚಾರಣೆಯನ್ನು ನಡೆಸಲು ಉದ್ಯುಕ್ತವಾಗಿದೆ.

ಶ್ರೀ ರಜ್ಜಿಯವರು ಕರ್ನಾಟಕ ಸರ್ಕಾರವ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿದ್ದಾರೆ.

ಧರ್ಮ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ.

೯೭. ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಂಕೇಶ್ವರ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ:

ಅ) ಕೊಲ್ಲಾಪುರ, ಸೊಲ್ಲಾಪುರ, ಪಾಂಡರಾಪುರ ಹಾ. ಮತ್ತು ತುಳಜಾಪುರ ದೇವಸ್ಥಾನಗಳಲ್ಲಿ ಯಾತ್ರಿಕರಿಗಾಗಿ ರಾಜ್ಯದ ಧರ್ಮಶಾಲೆಗಳನ್ನು ಪ್ರಾರಂಭಿಸಲು ತಡವಾಗಿರುವುದಕ್ಕೆ ಕಾರಣವೇನು?

ಆ) ಇದಕ್ಕಾಗಿ ಹಣವಿನ ವ್ಯವಸ್ಥೆ ಮಾಡಲಾಗಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಕೊಲ್ಲಾಪುರದಲ್ಲಿ ಧರ್ಮಶಾಲೆ ಕಟ್ಟುವ ಯೋಜನೆ ಇಲ್ಲ. ತುಳಜಾಪುರದಲ್ಲಿ ಮಾತ್ರ ೪೫೫೭ ಚ. ಮೀ. ವಿಸ್ತೀರ್ಣದ ಜಾಗವನ್ನು ರೂ. ೧,೨೫,೯೭೫ಗಳಿಗೆ ಖರೀದಿಸಿದೆ. ೩ ಕಡೆಯಲ್ಲೂ ನಿವೇಶನವನ್ನು ಉಚಿತವಾಗಿ ಪಡೆಯಬೇಕೆಂದು ಮೊದಲು ಮಹಾರಾಷ್ಟ್ರ ಸರ್ಕಾರದೊಂದಿಗೆ ಹಾಗೂ ಸರ್ಕಾರದ ಹಲವು ಇಲಾಖೆಗಳೊಂದಿಗೆ ವ್ಯವಹರಿಸಬೇಕಿದ್ದರಿಂದ ಹಾಗೂ ಕೆಲವು ಕಾನೂನಿನ ತೊಡಕಿನಿಂದ ತಡವಾಗಿದೆ. ಆದೂ ಇಲ್ಲದೆ ಪಂಡರಾಪುರ ಮತ್ತು ಸೊಲ್ಲಾಪುರದಲ್ಲಿ ಅಯ್ಕೆ ಮಾಡಿದ ನಿವೇಶನಗಳನ್ನು ಈಗ ನೀಡಲು ಸಾಧ್ಯವಿಲ್ಲವೆಂದು ಮಹಾರಾಷ್ಟ್ರ ಸರ್ಕಾರ ತಿಳಿಸಿರುವುದರ ಹಿನ್ನೆಲೆಯಲ್ಲಿ ಬೇರೆ ನಿವೇಶನವನ್ನು ಈಗ ಆಯ್ಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಸೂಕ್ತ ನಿವೇಶನ ದೊರೆತ ನಂತರ ಅದಕ್ಕೆ ತಗಲುವ ವೆಚ್ಚವನ್ನು ಭರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಜಮೀನು ಮಾಲೀಕರಿಗೆ, ಭೂ ಹಿಡುವಳಿದಾರರಿಗೆ ಪಾಸ್ ಬುಕ್ ಕೊಡುವ ಬಗ್ಗೆ.

೯೬. ಶ್ರೀ ಮಲ್ಲಿಕಾರ್ಜುನ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರೈತರಿಗೆ ಜಮೀನು ಪಾಸ್ ಬುಕ್ ಕೊಡುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು?

ಆ) ಜಮೀನಿನ ಬಗ್ಗೆ ವಿವರವಾದ ಮಾಹಿತಿಯನ್ನು ಕಂಪ್ಯೂಟರೈಸ್ ಮಾಡಲಿಕ್ಕೆ ಸರ್ಕಾರ ಏನಾದರೂ ಕೈಗೊಂಡ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಶೀಘ್ರವಾಗಿ ವಿತರಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಇಂತಹ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.